Ph. /Fax : 27682035

# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಹೆ. ಕಾಂಪ್ಲೆಕ್ಸ್, ನೆಲ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110, ವೆಬ್‌ಸೈಟ್ : www.biaapa.in

ಸಂ. ಬಿಐಎಎಪಿಎ/ಟಿಪಿ/ಸಿಸಿ/01/2009-10 ದಿನಾಂಕ: 19 OCT 2012

ಇವರಿಗೆ,

ಶ್ರೀ ನಾನಿ ಆರ್. ಚೋಕ್ಸಿ, ಅಥರೈಸ್ಡ್ ಸಿಗ್ನೇಟರಿ
ಮೆ॥ ಪುರುವಾಂಕರ ಕನ್‌ಸ್ಟ್ರಕ್ಷನ್ಸ್
ನಂ. 130/1, ಹಲಸೂರು ರಸ್ತೆ,
ಬೆಂಗಳೂರು 560 042

ಮಾನ್ಯರೆ,

ವಿಷಯ : ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸರ್ವೆ ನಂ. 30 ರಲ್ಲಿ (7ಎ-24½ ಗು), 31 ರಲ್ಲಿ (6ಎ- 25½ಗು), 32 ರಲ್ಲಿ (9ಎ-02ಗು), 33 ರಲ್ಲಿ (9ಎ-37¼ಗು), 34 ರಲ್ಲಿ (6ಎ-0½ಗು) ಮತ್ತು 161 ರಲ್ಲಿ (2ಎ) ಒಟ್ಟು 41ಎಕರೆ 09¾ಗುಂಟೆ ವಿಸ್ತೀರ್ಣದಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಸಮೂಹ ವಸತಿ ಅಭಿವೃದ್ಧಿ (ಗ್ರೂಪ್ ಹೌಸಿಂಗ್) ನಕ್ಷೆಯಲ್ಲಿ ಬರುವ "ಬಿಲ್ಡಿಂಗ್-7" ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ.

ಉಲ್ಲೇಖ : ತಮ್ಮ ಮನವಿ ಪತ್ರ ದಿನಾಂಕ: 01/03-10-2012

************

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಮನವಿ ಪತ್ರದಲ್ಲಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸರ್ವೆ ನಂ. 30 ರಲ್ಲಿ (7ಎ-24½ ಗು), 31 ರಲ್ಲಿ (6ಎ- 25½ಗು), 32 ರಲ್ಲಿ (9ಎ-02ಗು), 33 ರಲ್ಲಿ (9ಎ-37¼ಗು), 34 ರಲ್ಲಿ (6ಎ-0½ಗು) ಮತ್ತು 161 ರಲ್ಲಿ (2ಎ) ಒಟ್ಟು 41ಎಕರೆ 09¾ಗುಂಟೆ ವಿಸ್ತೀರ್ಣದಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಸಮೂಹ ವಸತಿ ಅಭಿವೃದ್ಧಿ (ಗ್ರೂಪ್ ಹೌಸಿಂಗ್)ಅಭಿವೃದ್ಧಿ ನಕ್ಷೆಯಲ್ಲಿನ ನಕ್ಷೆಯಲ್ಲಿ ಬರುವ "ಬಿಲ್ಡಿಂಗ್-7" ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲು ಕೋರಿರುವುದು ಸರಿಯಷ್ಟೆ.

ಸಮೂಹ ವಸತಿ (ಗ್ರೂಪ್ ಹೌಸಿಂಗ್) ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶಗಳಲ್ಲಿ ಕಟ್ಟಡಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15 (1) ರನ್ವಯ ಕಟ್ಟಡ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡಿ, ಪ್ರಾಧಿಕಾರದಿಂದ ನಿಯಮಾನುಸಾರ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಮಾಣವನ್ನು ನೀಡಲಾಗಿರುತ್ತದೆ.

ಆದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರನ್ವಯ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಅವಕಾಶವಿಲ್ಲವಾದ್ದರಿಂದ ನಿಮ್ಮ ಮನವಿಯ ಬಗ್ಗೆ ಪ್ರಾಧಿಕಾರದಿಂದ ಕ್ರಮ ಕೈಗೊಳ್ಳಲು ಸಾಧ್ಯವಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ

19/10/12

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ